ಅದಕ್ಕಾಗಿ, ಚಿನ್ನಪ್ಪನಲ್ಲಿ ಅದನ್ನು ಕೊಟ್ಟು, ಅಡಗಿಸಿಡಲು ಹೇಳಿದ್ದಾಳೆ. ಚಿನ್ನಪ್ಪ ಅದಕ್ಕೆ ಎಣ್ಣೆಗೂಡು ಸೂಕ್ತವಾದ ಜಾಗ ಅಂತ ಭಾವಿಸಿದ್ದಾನೆ ಎಂದು ನಾನು ಊಹಿಸಿದೆ!"

"ಹಾಗಿದ್ದರೆ ನೀನು ಆತ ಕದ್ದ ವಸ್ತುಗಳನ್ನೇ ಕದ್ದೆ! ಕಳ್ಳರ ಕಳ್ಳ!! ಚಿನ್ನಪ್ಪನಿಗೆ ಕಳ್ಳತನವಾಗಿದ್ದು ಇನ್ನೂ ಗೊತ್ತಾಗಿಲ್ಲ, ಅಲ್ವೇ?" ನಾನು ತಮಾಷೆ ಮಾಡಿದೆ.

"ಹೌದು."

"ಆದರೆ, ಆಕೆಗೆ ವಜ್ರವಿರುವುದು ಗೊತ್ತಾಗಿದ್ದು ಹೇಗೆ?" ಬೋಪಯ್ಯನ ತಲೆ ಕೊರೆದ ಪ್ರಶ್ನೆ.

"ಅದನ್ನು ನೀವೇ ತೋರಿಸಿದಿರಿ! ನಿಮ್ಮ ಕೋಣೆಯ ಪೂರ್ವ ಕಿಟಕಿಯ ಪಕ್ಕದಲ್ಲಿದ್ದ ಗಿಡಗಳ ಪಾತಿಯಡಿಯಲ್ಲಿ ನಾನು ಹೆಜ್ಜೆ ಗುರುತುಗಳನ್ನು ಕಂಡೆ. ಅವುಗಳ ಗಾತ್ರದಿಂದಲೇ ಅದು ರಾಣಿಯದ್ದಲ್ಲವೆಂದು ನನಗೆ ಮನದಟ್ಟಾಯಿತು. ಮನೆಯೆದುರು ಆ ಗುರುತು ಮೂಡಿಸಿದ ಚಪ್ಪಲಿಗಳೂ ಇದ್ದವು. ಸವಿಯ ಕೋಣೆಯಲ್ಲಿ ಸಿನಿಮಾ ಟಿಕೇಟುಗಳು ದೊರಕಿದವು. ಅವು ಸಂಗಮ್ ಥಿಯೇಟರಿನ ಮೊನ್ನೆ ರಾತ್ರಿಯ ಕೊನೆಯ ದೇಖಾವೆಯ ಟಿಕೇಟುಗಳು. ಬಹುಶಃ ಚಿನ್ನಪ್ಪ ಮತ್ತು ಸವಿ ಸಿನಿಮಾ ನೋಡಲು ಹೋಗಿ ಬರುವಾಗ, ಆಕೆಗೆ ನಿಮ್ಮ ಕೋಣೆಯಲ್ಲಿ ಬೆಳಕು ಕಂಡಿದೆ. ಆಕೆ ಕಿಟಕಿಯ ಬಳಿ ನಿಂತು ಗಮನಿಸಿದ್ದಾಳೆ. ಆಗ ನೀವು ತಿಜೋರಿ ತೆಗೆದು, ವಜ್ರಗಳನ್ನು ನೋಡಿ, ಮತ್ತೆ ಕೀಲಿಕೈಯನ್ನು ಇಡುವ ಜಾಗವನ್ನೂ ಕಂಡಿದ್ದಾಳೆ. ಇವತ್ತು ಬೆಳಗ್ಗೆ ಕೀಲಿ ಕೈ ಅಪಹರಿಸಿದ್ದಾಳೆ!"

"ಓಹ್! ನನ್ಗೆ ಗೊತ್ತೇ ಆಗಲಿಲ್ಲ. ಈಗ ಆಕೆಗೆ ವಜ್ರವಿರುವುದು ಗೊತ್ತಾಗಿಬಿಟ್ಟದೆ!!"

"ಅದು ನಿಜ. ಈಗ ನೀವು ಕೀಲಿ ಕೈ ಇಡುವ ಜಾಗ ಬದಲಿಸಿ. ಅಥವಾ ವಜ್ರಗಳನ್ನು ಬ್ಯಾಂಕಿನ ಲಾಕರಿನಲ್ಲಿಡಿ."

"ಕರಮಚಂದ, ಪಕ್ಕದ ಉಗ್ರಾಣದ ಕೋಣೆಯ ಬೀಗ ಅಲ್ಲಾಡುತ್ತಿತ್ತಲ್ಲ. ಯಾಕೆ?"

"ಉಗ್ರಾಣ ಖಾಲಿ ಮಾಡಬೇಕು ಅಂದಾಗ ರಾಣಿ ಗಾಬರಿಯಿಂದ ಓಡಿದಳಲ್ಲ! ಯಾಕೆನ್ನುವ ಬಗ್ಗೆ ಆಕೆಯನ್ನೇ ಕೇಳಬೇಕು. ಆದರೂ ಊಹನೆ ಮಾಡಬಹುದು. ನೀವಂದಂತೆ ಆಕೆಗೆ ನೂರೆಂಟು ವ್ಯವಹಾರ. ತುಸು ಕಾಸು ಮಾಡಿದ್ದಾಳೆ. ಗಂಡ ಕುಡುಕ. ಹಣ ಕೀಳುವ ಸಾಧ್ಯತೆಯಿದೆ. ಅದಕ್ಕೇ ಉಗ್ರಾಣದಲ್ಲಿ ಹಣ ಅಡಗಿಸಿಟ್ಟಿರಬೇಕು. ನಾವು ಉಗ್ರಾಣ ಖಾಲಿ ಮಾಡ್ಬೇಕು ಎಂದೊಡನೆ ಅಲ್ಲಿಗೆ ಹೋಗಿ ಹಣ ತೆಗೆದಿರಬೇಕಷ್ಟೇ!"

ನಂತರ ನಾವು ಅಲ್ಲಿಂದ ಹಿಂದಿರುಗಿದೆವು. ಆದರೆ ತದನಂತರ, ಬೋಪಯ್ಯ ವಜ್ರಗಳನ್ನು ಬ್ಯಾಂಕಲ್ಲಿ ಇರಿಸಿದನೇ ಅಥವಾ ಮನೆಯಲ್ಲೇ ಉಳಿಸಿಕೊಂಡನೇ ಎಂಬ ಬಗ್ಗೆ ನಮಗೆ ಮಾಹಿತಿಯೇನೂ ಸಿಗಲಿಲ್ಲ!


## ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.